



## ಹೆಂಚನ್ನು ಆವರಿಸಿದ ಹಣ್ಣಡಿಕೆ

ಡಿಸೆಂಬರ್, ಜನವರಿ ಸಮಯವೆಂದರೆ ಅಡಿಕೆ ರೈತರಿಗೆ ಸುಗ್ಗಿಯ ಕಾಲ. ಸಾಮಾನ್ಯವಾಗಿ ಡಿಸೆಂಬರ್‌ನಿಂದ ಆರಂಭವಾಗಿ ಮಾರ್ಚ್ ಅಂತ್ಯದವರೆಗೆ, ಸುಮಾರು ನಾಲ್ಕು ತಿಂಗಳ ಕಾಲ ಮಲೆನಾಡಿನ ಹಳ್ಳಿಗಳಲ್ಲಿ 'ಅಡಿಕೆ ಸುಗ್ಗಿ'ಯ ಸಂಭ್ರಮವನ್ನು ಕಾಣಬಹುದು. ಹಣ್ಣಾದ ಗೋಟಡಿಕೆಯನ್ನು ಬಿಸಿಲಿಗೆ ಒಣಹಾಕಿ ಸುಮಾರು ಎರಡು ತಿಂಗಳು ಒಣಗಿಸಿದರೆ ಉತ್ತಮ 'ಚಾಲಿ' ಅಡಿಕೆ ಸಿದ್ಧವಾಗುತ್ತದೆ. ಆದರೆ, ಕೆಲವು ಊರುಗಳಲ್ಲಿ ಬಿಸಿಲಿಗೆ ಒಣಗಿಸಲು ಸಾಲಾಗಿ, ಒತ್ತಾಗಿ ಮನೆಗಳಿರುವ ಕಾರಣ ಬಯಲು ಜಾಗದ ಅಭಾವವಿದೆ.

ಆ ಕಾರಣಕ್ಕೆ ಗೋಟಡಿಕೆ ಗೊನೆಗಳನ್ನು ರೈತರು ತಮ್ಮ ಹಂಚಿನ ಮನೆಯ ಮಾಡಿನ ಮೇಲೆ ಹಾಕಿ ಒಣಗಿಸುತ್ತಾರೆ. ದೂರದ ಬಯಲಲ್ಲಿ ಒಣಗಿಸಿದರೆ ಕಾವಲು ಕಾಯಬೇಕಾಗುತ್ತದೆ. ಆದರೆ ಮನೆ ಮೇಲೆ ಒಣಗಿಸಿದರೆ ಈ ಸಮಸ್ಯೆಯೂ ಇರುವುದಿಲ್ಲ. ಕೇಸರಿ ವರ್ಣದ ಹಣ್ಣಾದ ಗೋಟಡಿಕೆ ಗೊನೆಗಳನ್ನು ತೋಟದಿಂದ ತಂದು ಮನೆ ಮೇಲೆ ಒಣಗಲು ಹಾಕಿದ ಸಮಯದಲ್ಲಿ ಅದರ ಸೊಬಗನ್ನು ನೋಡಲು ಚೆಂದ. ಹಳ್ಳಿಯ ಹಳೆಯ ಹಂಚಿನ ಮನೆಗಳೆಲ್ಲ ಬಂಗಾರ ವರ್ಣದಿಂದ ಕಂಗೊಳಿಸುತ್ತವೆ.

–ಅರ್ಚನಾ ಹೆಗಡೆ, ಬೊಮ್ನಳ್ಳಿ



## ಪಾಳು ಬಿದ್ದ ಅಮೂಲ್ಯ ಶಾಸನ...

ನೀರಿನಲ್ಲಿ ಬರೆದ ಅಕ್ಷರ ಕೈ ಎತ್ತುವುದರಲ್ಲಿ ಮಾಯವಾಗುತ್ತದೆ. ಮಣ್ಣಿನಲ್ಲಿ ಬರೆದ ಬರಹ ನಡೆದಾಡಿದಾಗ ಮಾಸುತ್ತದೆ. ಆದರೆ ಕಲ್ಲಿನಲ್ಲಿ ಬರೆದ ಶಾಸನ ಶಾಶ್ವತವಾಗಿ ಉಳಿದುಕೊಳ್ಳುತ್ತದೆ. ಈ ಕಾಡಿನಲ್ಲಿ ಕಾಲಾಡಿಸಿ ನಡೆದರೆ, ಕಣ್ಣರಳಿಸಿ ನೋಡಿದರೆ, ಅಸಂಖ್ಯ ಶಿಲಾ ಶಾಸನಗಳು, ಐತಿಹ್ಯಗಳು ಗತಕಾಲದ ಕಥೆ ಹೇಳುತ್ತವೆ. ಕೆತ್ತನೆಯ ಶಿಲ್ಪಕಲೆಯ ಶಾಸನವು ಮಣ್ಣಲ್ಲಿ ಹೂತು, ಕಾಲಗರ್ಭದಲ್ಲಿ ಮಾಸಿ ಹೋಗಿದೆ.



ಪುರಾತನ ಕಾಲದ ಶಿಲ್ಪಕಲೆ, ಶಾಸನಗಳು, ದೇವಾಲಯದ ಕುರುಹುಗಳು ಯಲ್ಲಾಪುರ ತಾಲ್ಲೂಕಿನ ಕಣ್ಣಿಗೇರಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕನ್ನಡಗಲ್ ಗ್ರಾಮದ ಮಾವಳ್ಳಿ, ಚಿಕ್ಕಮಾವಳ್ಳಿ ಸುತ್ತಮುತ್ತಲಿನ ಕಾಡಿನಲ್ಲಿ ಕಂಡು ಬಂದವು. ಚಿಕ್ಕಮಾವಳ್ಳಿ, ಮಾವಳ್ಳಿ ಸುತ್ತಲಿನ ಕಾಡಿನಲ್ಲಿ ತ್ರಿಭುವನ ಮಲ್ಲ ಎಂಬ ಬಿರುದು ಹೊಂದಿದ್ದ ಐದನೇ ವಿಕ್ರಮಾದಿತ್ಯನ ಕಾಲದ ಯುದ್ಧದ ಸನ್ನಿವೇಶಗಳ ವೀರಗಲ್ಲುಗಳು, ಶಾಸನ ಪಾಳು ಬಿದ್ದ ಸ್ಥಿತಿಯಲ್ಲಿ ಪತ್ತೆಯಾಗಿವೆ. ಬೊಮ್ಮಣ್ಣ ನಾಯ್ಕ, ಬಲ್ಲಾಳದೇವ, ತಮ್ಮಣ್ಣ ನಾಯ್ಕ, ಮದ್ವಿಜ ನಾಯಕ ಎಂಬುವರ ಹೋರಾಟದ ಕಥೆಗಳು ಶಿಲಾಶಾಸನದಲ್ಲಿ ದಾಖಲಿಸಲಾಗಿದೆ. ಯುದ್ಧದಲ್ಲಿ ಗೆದ್ದರೆ ಜಯ, ಸೋತರೆ ವೀರಮರಣ ಎಂಬ ಧ್ಯೇಯದ ವೀರಗಲ್ಲುಗಳಲ್ಲಿ ಯುದ್ಧದಲ್ಲಿ ಮಡಿದವರನ್ನು ವಾದ್ಯ, ಹಾಡು, ನರ್ತನದ ಮೂಲಕ ಮೆರವಣಿಗೆಯಲ್ಲಿ ಗೌರವಯುತವಾಗಿ ಸ್ವರ್ಗಕ್ಕೆ ಕಳುಹಿಸುವ ಚಿತ್ರಣಗಳನ್ನು ಕೆತ್ತಲಾಗಿದೆ. ಅಲ್ಲದೇ ನಂದಿ, ಈಶ್ವರ ಲಿಂಗ, ಪೂಜೆ ಸಲ್ಲಿಸುವುದು, ತಪಸ್ಸಿಗೆ ಕುಳಿತ ಜೈನಮುನಿಗಳ ಚಿತ್ರಗಳನ್ನು ಕೆತ್ತಲಾಗಿದೆ.

ಇನ್ನೊಂದು ಪ್ರದೇಶದಲ್ಲಿ ಭುವನೇಶ್ವರಿ ದೇವಸ್ಥಾನದ ಕುರುಹುಗಳು, ಕರ್ಣಮುಚ್ಚುಗೆ, ಕಲ್ಯಾಣಿಗಳು, ದೊಡ್ಡ ಹಾಗೂ ಸಣ್ಣ ನಂದಿ ವಿಗ್ರಹಗಳು ವಿರೂಪವಾದ ಸ್ಥಿತಿಯಲ್ಲಿ ಕಂಡುಬಂದಿವೆ. ಅಗಸ್ತ್ಯ ಮುನಿ, ಅವರ ಶಿಷ್ಯ ವಾಲಖಿಲ್ಯ ಮುನಿಗಳಿಂದ ಈ ಭಾಗದಲ್ಲಿ ಭುವನೇಶ್ವರಿಯ ದೇವಸ್ಥಾನ ಸ್ಥಾಪನೆ, ಆರಾಧನೆ ನಡೆದಿರುವ ಬಗ್ಗೆ ಸಾಕಷ್ಟು ಕುರುಹುಗಳು ಲಭ್ಯವಾಗಿವೆ. ಭುವನೇಶ್ವರಿ ತಾಯಿ ಈ ಭಾಗದ ಮೂಲ ದೇವರೆಂಬ ಬಗ್ಗೆಯೂ ದಾಖಲೆಗಳು ದೊರೆತಿವೆ. ಕನ್ನಡಗಲ್ಲಿನ ಕನ್ನಡದ ಶಾಸನಗಳು ಪಾಳು ಬಿದ್ದಿದ್ದು, ಅವುಗಳ ಉತ್ಖನನ, ಸಂಶೋಧನೆ ಆಗಬೇಕಿದೆ. ಈ ಕುರಿತು ಮೂಡಿಲಿಪಿ ತಜ್ಞ ಸಂಶೋಧಕ ಡಾ. ಸಂಗಮೇಶ ಕಲ್ಯಾಣಿ ಅಧ್ಯಯನ ನಡೆಸಿದ್ದು, ಮಾಸಿದ ಶಾಸನವನ್ನು ಹೊರ ಜಗತ್ತಿಗೆ ಪರಿಚಯಿಸುವ ಕೆಲಸ ಮಾಡುತ್ತಿದ್ದಾರೆ. 'ಇಲ್ಲಿ ಜೈನ, ಶೈವ ಶಾಸನಗಳು ಹೇರಳವಾಗಿ ಕಂಡುಬಂದಿವೆ. ತ್ರಿಭುವನ ಮಲ್ಲ ಬಿರುದಾಂಕಿತ ವಿಕ್ರಮಾದಿತ್ಯನ ಶಾಸನಗಳಾಗಿದ್ದು, ಅರಣ್ಯ ಪ್ರದೇಶದಲ್ಲಿ ಅನಾಥವಾಗಿ ಬಿದ್ದಿವೆ. ಇವುಗಳ ಅಧ್ಯಯನ, ಸಂರಕ್ಷಣೆಗೆ ಸರ್ಕಾರ ಮುಂದಾಗಬೇಕು. ಈ ಭಾಗದಲ್ಲಿ ಭುವನೇಶ್ವರಿಯ ಕ್ಷೇತ್ರ ಪ್ರತೀತಿ ಹೊಂದುವ ರೀತಿಯಲ್ಲಿ ಪುನರ್ ಸ್ಥಾಪನೆ ಆಗಬೇಕು' ಎಂಬುದು ಅವರ ಅಭಿಪ್ರಾಯ.

–ಸುಬ್ರಾಯ ಬಿದ್ರೆಮನೆ, ಯಲ್ಲಾಪುರ